# ನಮ್ಮ ನೆತ್ತಿಯ ಮೇಲೆ ಹಿರಿಯರ ಹರಕೆಯ ಕೈ



**ಅಜ್ಜನದೋ ಅಪ್ಪನದೋ ಸಾಮಾಜಿಕ ಕಾಳಜಿಯ ಕೆಲಸಗಳು ಮಕ್ಕಳಲ್ಲಿ ಹಿರಿಯರ ಬಗ್ಗೆ ಅಭಿಮಾನ ಹುಟ್ಟಿಸಬಲ್ಲವು.**

■ ಸ್ವಯಂಪ್ರಭಾ

ಚೈತಾಲಿ ಮೂರನೇ ಕ್ಲಾಸು. ಅವಳ ಅಮ್ಮ ನಳಿನಿ, ತನ್ನ ಮಾವನನ್ನು ಯಾವಾಗಲೂ ಬೈಯುತ್ತಲೇ ಇರುತ್ತಾರೆ. ಮಾವ ಎಂದರೆ ಅವರ ಪತಿಯ ತಂದೆ. ಚೈತಾಲಿಯದ್ದು ತಕ್ಕಮಟ್ಟಿಗೆ ಅನುಕೂಲಸ್ಥ ಕುಟುಂಬ. ಉಂಡುಟ್ಟು ಬಾಳುವೆ ಮಾಡುವಷ್ಟು ಸಂಪಾದನೆ ಆ ಕುಟುಂಬಕ್ಕೆ ಇದೆ. ಒಂಚೂರು ಜಮೀನೂ ಇದೆ. ಚೈತಾಲಿಯ ಮಾವ, ಬಹಳ ಹಿಂದೆ ಪಕ್ಕದ ಗುಡಿಯಲ್ಲಿ ಸೇವಾ ಚೀಟಿಗಳನ್ನು ಬರೆಯುವ ಕೆಲಸ ಮಾಡುತ್ತಿದ್ದರು. ಅವರಿಗೆ ಇರುವ ಕೊಂಚ ಜಮೀನಿನಲ್ಲಿ ದುಡಿಯುತ್ತ, ದೇವರ ಸೇವೆ ಮಾಡುತ್ತ, ಮಕ್ಕಳ ವಿದ್ಯೆಗೆ ಕೊರತೆ ಬಾರದಂತೆ ನೋಡಿಕೊಳ್ಳುತ್ತಿದ್ದರು. 'ದಾನ ಧರ್ಮ'ದ ಬದುಕು ತಮ್ಮದಾಗಬೇಕು ಎಂಬ ಆಶಯ ಅವರದ್ದು. ಹಾಗಾಗಿ ತಮ್ಮದೇ ಜಾಗದಲ್ಲಿ ಒಂದು ಕೆರೆಯನ್ನು ಕಟ್ಟಿಸಿ, ಅಕ್ಕಪಕ್ಕದ ಜಮೀನಿಗೆ ಉಚಿತ ನೀರು ಕೊಡುವ ಕೆಲಸ ಮಾಡಿದ್ದರು. ಅವರು ಮಾಡಿದ ಈ ಕೆಲಸದಿಂದಾಗಿ, ಊರಿನಲ್ಲಿ ಅವರಿಗೆ ಗೌರವವಿತ್ತು. ಹಣವಂತರಲ್ಲದೇ ಇದ್ದರೂ, 'ನಮಸ್ಕಾರ ಸುಬ್ಬಣ್ಣೋರೆ' ಎಂದು ಹೇಳಿಯೇ ನಾಲ್ಕು ಜನರು ಮುಂದೆ ಸಾಗುತ್ತಿದ್ದರು. ಹಾಗೆ ಅಕ್ಕಪಕ್ಕದ ತೋಟಭತ್ತದ ಗದ್ದೆಗೆ ನೀರುಣಿಸುತ್ತಿದ್ದ ತಮ್ಮ ಕೆರೆಯನ್ನು ಅವರು ಪಂಚಾಯಿತಿಗೆ ಬರೆದುಕೊಟ್ಟು, ನೀರು ಹಂಚಿಕೆಯ ಜವಾಬ್ದಾರಿಯನ್ನು ವರ್ಗಾಯಿಸಿಬಿಟ್ಟಿದ್ದರು.

ಯಾವುದೇ ದಾನ ಧರ್ಮವು ತಮ್ಮ ಮನಸ್ಸಿನಲ್ಲಿ 'ಅಹಂ' ಅನ್ನು ಮೂಡಿಸಬಾರದು ಎಂಬ ನಿಲುವು ಅವರದು. ಆದರೆ ನಳಿನಿಗೆ ಆ ಇಡೀ ಘಟನೆ ಇಷ್ಟವಾಗಿರಲಿಲ್ಲ. ಸಾವಿರಾರು ಎಕರೆ ಭೂಮಿ ಹೊಂದಿರುವ ಜನರು, ಒಂದೇ ಒಂದು ಚದರ ಅಡಿ ಜಮೀನಿಗಾಗಿ 'ಹೊಡಿ ಬಡಿ' ಎಂದು ಕಚ್ಚಾಡುತ್ತಿರುವಾಗ, ತನ್ನ ಮಾವ, ಹೀಗೆ ಸುಮಾರು ನಾಕು ಗುಂಟೆ ಜಮೀನುಕೆರೆಯನ್ನು ಪಂಚಾಯಿತಿಗೆ ಬರೆದುಕೊಟ್ಟಿದ್ದು ಎಷ್ಟು ಸರಿ? ಇದು ಅವರು ತಮ್ಮ ಮಕ್ಕಳಿಗೆ ಮಾಡಿದ ಅನ್ಯಾಯ ಎಂಬುದು ನಳಿನಿಯ ವರಸೆ. ಸುಬ್ಬಣ್ಣ ತೀರಿಕೊಂಡ ಮೇಲೂ ನಳಿನಿ ಈ ಕುರಿತು ಗಂಡನ ಜೊತೆಗೆ ಸಿಡಿಮಿಡಿ ಮಾತಾಡುತ್ತಲೇ ಇರುತ್ತಿದ್ದಳು.

ಇದೊಂದು ಅಪ್ಪಟ ಮೌಲ್ಯಗಳ ತಾಕಲಾಟದ ಕಥೆ ಅನ್ನಿಸಬಹುದು. ಆದರೆ 'ಲೋಕೋಪಕಾರದ ಕೆಲಸ'ವನ್ನು ಹಂಗಿಸಿ ಮಾತನಾಡುವ ಅಮ್ಮನ ಮಾತುಗಳನ್ನು ಕೇಳುತ್ತ, ಚೈತಾಲಿಯ ಯೋಚನೆಗಳು ಹೇಗೆ ರೂಪುಗೊಳ್ಳಬಹುದು ಎಂಬ ಸಣ್ಣದೊಂದು ಅಳುಕು ಕಾಡುತ್ತದೆ.

ಪ್ರತಿ ಮನೆಯ ಹಿರಿಯರೂ ಒಂದಲ್ಲ ಒಂದು ಪರೋಪಕಾರದ ಕೆಲಸವನ್ನು ಮಾಡಿರುತ್ತಾರೆ. ನಮ್ಮ ಹಿರಿಯರ ತಲೆಮಾರೇ ಹಾಗಿತ್ತು. ಕೆಲವು ಕತೆಗಳು ಭಾರೀ ಪ್ರಚಾರ ಪಡೆದಿರಬಹುದು. ಮತ್ತೆ ಕೆಲವು ಕತೆಗಳು, ಜೀವನೋಪಾಯದ ಹೋರಾಟದಲ್ಲಿ ಮರೆಯಾಗಿರಬಹುದು. ಆದರೆ ಹಿರಿಯರ ಕಥೆಗಳನ್ನು ನಾವು ಮಕ್ಕಳಿಗೆ ಹೇಳುತ್ತಲೇ ಇರಬೇಕು.

ದೇವರ ಭಯಭಕ್ತಿ ಇರಿಸಿಕೊಂಡು ಪರೋಪಕಾರ ಕೆಲಸ ಮಾಡುತ್ತಿದ್ದ ಹಿರಿಯ ಅತ್ತೆ, ಸಾವಿರಾರು ಬತ್ತಿ ಹೆಣೆದು ಊರಿನ ಜಾತ್ರೆಗೆ ಕೊಡುತ್ತಿದ್ದ ದೊಡ್ಡಜ್ಜಿ, ಪಕ್ಕದ ಮನೆಯ ಹಸುಗಳಿಗೆ ಅಕ್ಕಚ್ಚು ಹಾಕುತ್ತಿದ್ದ ದೊಡ್ಡಪ್ಪ, ಕುಸ್ತಿಯಲ್ಲಿ ಗೆದ್ದ ಚಿಕ್ಕಜ್ಜ, ದಿನಾ ಸಂಜೆ ಮಕ್ಕಳಿಗೆ ಕಬ್ಬಡ್ಡಿ ಆಟ ಆಡಿಸುತ್ತಿದ್ದ ಅಜ್ಜ, ಊರ ಹಬ್ಬದಂದು ಮನೆಯಿಂದಲೇ ಸಿದ್ಧವಾಗಿ ಹೋಗುತ್ತಿದ್ದ ಶರಬತ್ತು ಹೀಗೆ ಅತ್ಯಂತ ಪುಟ್ಟ ಪುಟ್ಟ ವಿಚಾರಗಳನ್ನೂ ಮಕ್ಕಳಿಗೆ ಆಗಾಗ ಕಥೆ ಮಾಡಿ ಹೇಳುವ ವಾಡಿಕೆ ಇದ್ದರೆ ಚೆನ್ನ.

'ನಮ್ಮ ಅಪ್ಪ ಎಷ್ಟೊಂದು ಸಾಧನೆಗಳನ್ನು ಮಾಡಿದ್ದಾರೆ!' ಎಂಬ ಬಗ್ಗೆ ನಮಗೆ ಬಹಳ ಹೆಮ್ಮೆ ಇರುತ್ತದೆ. ಆ ವಿಚಾರಗಳನ್ನು ನಾವು ನಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇವೆ. ನೆಂಟರಿಷ್ಟರು ಒಟ್ಟು ಸೇರಿದಾಗ ಕೆಲವು ಘಟನೆಗಳು ಮಾತುಗಳ ರೂಪದಲ್ಲಿ ಬರುತ್ತವೆ. ಆದರೆ ಅಜ್ಜನ ಹೆಸರೇನು, ಅಜ್ಜಿಯ ಹೆಸರೇನು, ಅವರ ಸ್ವಭಾವ ಎಂತಹುದಾಗಿತ್ತು ಎಂಬ ವಿಚಾರಗಳಲ್ಲಿ ಒಳ್ಳೆಯದನ್ನು ಆರಿಸಿ ಮಕ್ಕಳಿಗೆ ತಿಳಿಹೇಳುವುದು ಬಹಳ ಮುಖ್ಯ. ಅಂಥ ಮಾತುಗಳು ಮಕ್ಕಳಲ್ಲಿ ಎರಡು ಬಗೆಯ ಸಕಾರಾತ್ಮಕ ಭಾವನೆಯನ್ನು ಮೂಡಿಸುತ್ತವೆ. ಮೊದಲನೆಯದಾಗಿ, ಕುಟುಂಬದ ಹಿರಿಯರ ಬಗ್ಗೆ ಗೌರವವನ್ನು ಮೂಡಿಸುತ್ತದೆ. ಎರಡನೆಯದು, ಆ ಗೌರವವನ್ನು ಉಳಿಸುವ ಜವಾಬ್ದಾರಿ ತಮ್ಮ ಹೆಗಲ ಮೇಲಿದೆ ಎಂಬ ಭಾವನೆಯನ್ನು ಮಕ್ಕಳಲ್ಲಿ ಪರೋಕ್ಷವಾಗಿ ಬೆಳೆಸುತ್ತದೆ. ಈ ಸಕಾರಾತ್ಮಕ ಧೋರಣೆಯು ಮಕ್ಕಳ ಬದುಕನ್ನು ಕಟ್ಟುವಲ್ಲಿ ಖಂಡಿತ ಸಹಕಾರಿ ಆಗಿರುತ್ತದೆ.

ಹಿರಿಯರ ಲೋಕೋಪಕಾರದ ಗುಣಸ್ವಭಾವದಿಂದಾಗಿ ಇಂದು ನಾವು ಈ ಸಮಾಜದಲ್ಲಿ ನೆಮ್ಮದಿಯ ಬಾಳುವೆ ಮಾಡುವುದು ಸಾಧ್ಯವಾಗಿದೆ. ಅದೇ ರೀತಿ ಇಂದು ನಾವು ಮಾಡುವ ಸಾಮಾಜಿಕ ಕೆಲಸಗಳು ನಾಳಿನ ಸಮಾಜವನ್ನು, ಅಂದರೆ ನಮ್ಮ ಮಕ್ಕಳು ಬಾಳುವ ಸಮಾಜವನ್ನು ಸುಂದರವಾಗಿ ಇರಿಸಲು ಸಹಕಾರಿ ಆಗಬಲ್ಲವು. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ, ಹಿರಿಯರ ಕೆಲಸಗಳನ್ನು ಮಕ್ಕಳಿಗೆ ಸಕಾರಾತ್ಮಕ ಧೋರಣೆಯೊಂದಿಗೆ ಹೇಳುವ ಮನೋಧರ್ಮವನ್ನು ಪೋಷಕರು ರೂಪಿಸಿಕೊಳ್ಳಬೇಕು.

ಪ್ರತಿಕ್ರಿಯಿಸಿ: feedback@sudha.co.in